## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಬೆಲೆ ಆಯೋಗಕ್ಕೆ(Agriculture Price Commission) ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ:ಕೃಇ 61 ಕೃಉಇ 13, ಬೆಂಗಳೂರು, ದಿನಾಂಕ:31-01-2014.

**ಪ್ರಸ್ತಾವನೆ:-**

2013-14ನೇ ಸಾಲಿನಲ್ಲಿ ದಿನಾಂಕ:12-07-2013ರಂದು ಮಂಡಿಸಲಾದ ಪರಿಷ್ಕೃತ ಅಯವ್ಯಯ ಭಾಷಣದ ಕಂಡಿಕೆ 50ರನ್ವಯ ಕೃಷಿ ಬೆಲೆ ಆಯೋಗವನ್ನು ಮೇಲೆ ಓದಲಾದ ಸರ್ಕಾರಿ ಆದೇಶ ದಿನಾಂಕ:31-01-2014ರಲ್ಲಿ ರಚಿಸಲಾಗಿದೆ.

ನೂತನ ಕೃಷಿ ಬೆಲೆ ಆಯೋಗಕ್ಕೆ ಅಧ್ಯಕ್ಷರು ಹಾಗೂ ಅಧಿಕಾರಿ ಮತ್ತು ಸದಸ್ಯರನ್ನು ಮೇಲೆ ಓದಲಾದ ಸರ್ಕಾರಿ ಆದೇಶದ ಅನುಬಂಧ-3ರಲ್ಲಿ ತಿಳಿಸಿರುವಂತೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಬೇಕಾಗಿರುತ್ತದೆ.

ದಿನಾಂಕ:31-01-2014ರಂದು ಹೊರಡಿಸಲಾಗಿರುವ ಕೃಷಿ ಬೆಲೆ ಆಯೋಗದ ಆದೇಶದ ಅನುಬಂಧ-1 ಮತ್ತು 2ರಂತೆ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಕರ್ತವ್ಯಗಳು ಅದರಡಿಯಲ್ಲಿ ಸೂಚಿಸಿರುವಂತೆ, ಕೃಷಿ ಬೆಲೆ ಆಯೋಗವು ಕರ್ತವ್ಯ ನಿರ್ವಹಿಸುವುದು ಹಾಗೂ ವರದಿಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ಅದರಂತೆ ಅಧ್ಯಕ್ಷರು ಮತ್ತು ಸದಸ್ಯರುಗಳ ನಾಮನಿರ್ದೇಶನ ಮಾಡಿ ಈ ಕೆಳಕಂಡಂತೆ ಆದೇಶ ಹೊರಡಿಸಲು ತೀರ್ಮಾನಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಕೃಇ 12 ಕೃಉಇ 2014, ಬೆಂಗಳೂರು, ದಿನಾಂಕ:25-06-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಕೃಷಿ ಬೆಲೆ ಆಯೋಗ ರಚನೆ ಆದೇಶಾನುಸಾರ ಮತ್ತು ಅದರಲ್ಲಿ ವಿವರಿಸಿರುವ ಧ್ಯೇಯ, ದೃಷ್ಟಿಕೋನಗಳು, ಷರತ್ತು ಮತ್ತು ನಿಬಂಧನೆಗಳು ಹಾಗೂ ಕರ್ತವ್ಯಗಳ ಅನುಸಾರ ಕಾರ್ಯನಿರ್ವಹಿಸಲು ಈ ಕೆಳಕಾಣಿಸಿದ ಅಧ್ಯಕ್ಷರು ಮತ್ತು ಸದಸ್ಯರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೃಷಿ ಬೆಲೆ ಆಯೋಗಕ್ಕೆ ನಾಮ ನಿರ್ದೇಶನ ಮಾಡಿದೆ.

1) ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, – ಅಧ್ಯಕ್ಷರು,
2) ಶ್ರೀ ಹನುಮನಗೌಡ ಬೆಳಗುರ್ಕಿ, ರೈತರ ಪ್ರತಿನಿಧಿ – ಸದಸ್ಯರು,
3) ಶ್ರೀ ನರಸಿಂಹಪ್ಪ, ರೈತರ ಪ್ರತಿನಿಧಿ – ಸದಸ್ಯರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ – ಸದಸ್ಯರು
5) ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ – ಸದಸ್ಯರು
6) ಆಯುಕ್ತರು, ಕೃಷಿ ಇಲಾಖೆ – ಸದಸ್ಯ ಕಾರ್ಯದರ್ಶಿ.

ಕೃಷಿ ಬೆಲೆ ಆಯೋಗವು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಗಳ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಕೃಷಿ ಬೆಲೆ ಆಯೋಗವು ಈ ಆದೇಶ ಹೊರಡಿಸಿದ ದಿನಾಂಕದಿಂದ ಮೂರು ವರ್ಷದ ಅವಧಿ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಹಾಗೂ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಆದೇಶವನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ನೂರು ಪ್ರತಿಗಳನ್ನು ಸಚಿವಾಲಯದ ಕೃಷಿ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ:-

1) ಪ್ರಧಾನ ಮಹಾಲೇಖಪಾಲರು(ಜಿ ಅಂಡ್ ಎಸ್‌ಎಸ್‌ಎ) (ಇ ಅಂಡ್ ಆರ್‌ಎಸ್‌ಎ) ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು-560001
2) ಪ್ರಧಾನ ಮಹಾಲೇಖಪಾಲರು, (ಎ ಅಂಡ ಇ ) ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು-560001
3) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯವರು,
4) ಎಲ್ಲಾ ಸಚಿವರು/ರಾಜ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು,
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
6) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಕಾರ್ಯದರ್ಶಿಗಳು,
7) ಕೃಷಿ ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,

8) ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, ಕುಂದಾದ್ರಿ, ನಂ:416, 14ನೇ ಬಿ ಕ್ರಾಸ್, 10 ಬಿ ಮೈನ್, ನೂ ಟೌನ್, ಯಲಹಂಕ, ಬೆಂಗಳೂರು-560106

9) ಶ್ರೀ ಹನುಮನಗೌಡ ಬೆಳಗುರ್ಕಿ, ರೈತರ ಪ್ರತಿನಿಧಿ, ಬೆಳಗುರ್ಕಿ, ಮಾದಸಿರವಾರ ಅಂಚೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ-584128

10) ಶ್ರೀ ನರಸಿಂಹಪ್ಪ, ರೈತರ ಪ್ರತಿನಿಧಿ, ಕೃಷಿ ಆಯುಕ್ತರ ಮುಖಾಂತರ,

11) ನಿರ್ದೇಶಕರು, ತೋಟಗಾರಿಕಾ ಇಲಾಖೆ, ಲಾಲ್‌ಬಾಗ್, ಬೆಂಗಳೂರು,

12) ನಿರ್ದೇಶಕರು, ಕೃಷಿ ಮಾರುಕಟ್ಟೆ ನಿರ್ದೇಶನಾಲಯ, ಬೆಂಗಳೂರು,

13) ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು,

14) ಉಪ ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ,

15) ಅಧ್ಯಕ್ಷರು, ಕರ್ನಾಟಕ ಕೃಷಿ ಮಿಷನ್, ಬೆಂಗಳೂರು,

16) ಅಪರ ಕೃಷಿ ನಿರ್ದೇಶಕರು,(ಬೆಳೆ ಅಭಿವೃದ್ಧಿ ಮತ್ತು ಯೋಜನೆ) ಬೆಂಗಳೂರು,

17) ಎಲ್ಲಾ ಇಲಾಖಾ ಮುಖ್ಯಸ್ಥರು/ ವಿಭಾಗಾಧಿಕಾರಿಗಳು/ಜಿಲ್ಲಾಧಿಕಾರಿಗಳು,

18) ಎಲ್ಲಾ ಜಿಲ್ಲಾ ಪಂಚಾಯತಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,

19) ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು,

20) ವಿಶೇಷ ಕಾರ್ಯದರ್ಶಿಗಳು/ಸರ್ಕಾರದ ಉಪ ಕಾರ್ಯದರ್ಶಿಗಳು 1 ಮತ್ತು 2 ಕೃಷಿ ಇಲಾಖೆ,

21) ಎಲ್ಲಾ ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು ಕೃಷಿ/ತೋಟಗಾರಿಕಾ ಇಲಾಖೆ,

22) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.